ಓ.ಎಸ್.ನಂ.11/2024 ಪಿ.ಡಬ್ಲ್ಯೂ-1

ದಿನಾಂಕ 18.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆ:-** ವಾದಿ ಪರ ವಕೀಲರಿಂದ

ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ಕೇಸಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಸಾಕ್ಷಿದಾರರು ಲೋನ್ ಅಪ್ಲಿಕೇಷನ್ ಹಾಜರು ಮಾಡಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು, ಸಾಲ ಮಂಜೂರಾತಿ ಪತ್ರವನ್ನು ನಿಪಿ-2 ಎಂದು, ಅಡಮಾನ ಪತ್ರದ ಕರಾರು ಹಾಜರು ಮಾಡಿದ್ದು ಅದನ್ನು ನಿಪಿ-3 ಎಂದು, ಸಿಂಪಲ್ ಮಾರ್ಟ್‌ಗೇಜ್ ಡೀಡ್ ನಿಪಿ-4 ಎಂದು, ಜಾಮೀನು ಪತ್ರವನ್ನು ನಿಪಿ-5 ಎಂದು, Acknowledgment of liability ನಿಪಿ-6 ಎಂದು, ಲೆಟರ್ ಆಫ್ ರಿವೈವರ್ ನಿಪಿ-7 ಎಂದು, ಮೂರು ಪಹಣಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ 8 ರಿಂದ 10 ಎಂದು ಗುರುತಿಸಲಾಯಿತು. ನೋಟಿಸ್ ಹಾಜರುಪಡಿಸಿದ್ದು ಅದನ್ನು ನಿ.ಪಿ-11 ಎಂದು, ಆರ್.ಪಿ.ಎ.ಡಿ. ರಶೀದಿ ನಿಪಿ-12 ಮತ್ತು 13 ಎಂದು, ಬ್ಯಾಂಕ್ ಸ್ಟೇಟ್ ಮೆಂಟ್ ನಿಪಿ-14 ಎಂದು ಗುರುತಿಸಲಾಯಿತು.

ಪಾಟೀ ಸವಾಲು:

ಪ್ರತಿವಾದಿಯು ಪರ ವಕೀಲರು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಸುಧೀರ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.